

ಚೆನ್ನಕ್ಕಾಗಲೀ ನಾನು ಎಂದೂ ಆಸೆ ಪಟ್ಟವನಲ್ಲ. ಹಾಗಾದರೆ, ಬಹುಶಃ ಅದು ಅವನ ಆ ಕಣ್ಣುಗಳೇ ಇರಬೇಕು. ಹೌದು, ನಿಜವಾಗಲೂ ಅದೇ! ಅವನ ರಣಹದ್ದಿನಂತಹ, ಕಳೆಗುಂದಿದ, ತೆಳುವಾದ ಪೊರೆ ಆವರಿಸಿಕೊಂಡ ಆ ಮುದಿ ನೀಲಿ ಕಣ್ಣುಗಳು! ಆ ಕಣ್ಣುಗಳು ನನ್ನೆಡೆಗೆ ತಿರುಗಿದಾಗಲಂತೂ, ನನಗೇ ಗೊತ್ತಿಲ್ಲ, ನನ್ನ ದೇಹದೊಳಗೆ ಹರಿಯುತ್ತಿದ್ದ ರಕ್ತ ಹಿಮದಂತೆ ಒಮ್ಮೆಲೇ ತಣ್ಣಗಾಗುತ್ತಿತ್ತು. ಇದನ್ನು ನಾನು ಆ ಗಳಿಗೆಗೇ ತೀರ್ಮಾನಿಸಿದ್ದಲ್ಲ. ಕಾಲಾನುಕ್ರಮೇಣ, ನಿಧಾನವಾಗಿ, ಮುದುಕನನ್ನು ಸಾಯಿಸಬೇಕೆಂದು ನಾನು ನಿರ್ಧರಿಸಿದೆ. ಆ ಅನಿಷ್ಠ ಕಣ್ಣುಗಳನ್ನು ನಿವಾರಿಸಿಕೊಳ್ಳಬೇಕೆಂಬುದಷ್ಟೇ ನನ್ನ ಅಭಿಲಾಷೆಯಾಗಿತ್ತು.

ಇದಿಷ್ಟು ನಿಜ... ಆದರೆ, ನೀವು ನನ್ನನ್ನು ಹುಚ್ಚನೆಂತಲೇ ನಿರ್ಧರಿಸಿಬಿಟ್ಟಿರಿ ಅಲ್ಲವೇ? ಹುಚ್ಚರಿಗೆ ಏನೂ ಗೊತ್ತಿರುವುದಿಲ್ಲ. ಆದರೆ ನಾನು ಈ ಕುರಿತು ಎಷ್ಟೊಂದು ವ್ಯವಸ್ಥಿತವಾಗಿ, ಬುದ್ಧಿವಂತಿಕೆಯಿಂದ ಮುಂದುವರೆದೆನೆಂದರೆ ಮುದುಕನನ್ನು ಸಾಯಿಸುವ ಆ ವಾರದ ಮೊದಲೆಂದೂ ನಾನು ಅವನ ಬಗ್ಗೆ ಅಷ್ಟೊಂದು ಕಾಳಜಿವಹಿಸಿರಲಿಲ್ಲವೆನ್ನುವುದೂ ನಿಜಾನೇ. ಪ್ರತಿ ರಾತ್ರಿ, ಅಂದರೆ ಮಧ್ಯರಾತ್ರಿ ನಾನು ಅವನ ಕೋಣೆಯ ಬಾಗಿಲನ್ನು ಸದ್ದಿಲ್ಲದೆ ಮೆಲ್ಲಗೆ ತೆರೆಯುತ್ತಿದ್ದೆ. ಮೊದಮೊದಲು ನನ್ನ ತಲೆ ಮಾತ್ರ ಒಳ ಹೊಕ್ಕುವಷ್ಟು... ನಂತರ ನನ್ನ ಕೈಯಲ್ಲಿರುವ, ಸ್ವಲ್ಪವೂ ಬೆಳಕೂ ಹೊರಚೆಲ್ಲದಂತೆ